ಚಿಕ್ಕಮಂಗಳೂರು ಜಿಲ್ಲೆ ಜಲಾನಯನ ಪ್ರದೇಶ ಅಭಿವೃದ್ಧಿ ಯೋಜನೆ

2831(3547) ಶ್ರೀ ನೀಲಕಂಠಪ್ಪ ಬಿ.ಆರ್. (ತರೀಕೆರೆ):- ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1999-2000ನೇ ಸಾಲಿನಲ್ಲಿ ಚಿಕ್ಕಮಗಳೂರು ಜಿಲ್ಲೆಗೆ ಜಲಾನಯನ ಪ್ರದೇಶ ಅಭಿವೃದ್ಧಿಗೆ ಒದಗಿಸಿರುವ ಹಣವೆಷ್ಟು?

ಆ) ಕಾಮಗಾರಿಗಳಿಗೆ ವೆಚ್ಚವಾಗಿರುವ ಹಣವೆಷ್ಟು? ಈ ಕಾಮಗಾರಿಗಳು ಪೂರ್ಣಗೊಂಡಿದೆಯೇ;

ಇ) ಕಾಮಗಾರಿಗಳ ವಿವರ ನೀಡುವುದು;

ಈ) ತರೀಕೆರೆ ತಾಲ್ಲೂಕಿಗೆ ಈ ಸಾಲುಗಳಲ್ಲಿ ಬಿಡುಗಡೆ ಆಗಿರುವ ಹಣವೆಷ್ಟು?

ಉ) ಯಾವ ಯಾವ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ?

ಶ್ರೀ ಎಸ್.ಕುಮಾರ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು):-

ಅ) 10.00 ಲಕ್ಷ ರೂ.ಗಳು

ಆ) ರೂ. 10.00 ಲಕ್ಷ ವೆಚ್ಚವಾಗಿದ್ದು, ಎಲ್ಲವೂ ಪೂರ್ಣಗೊಂಡಿವೆ

ಇ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಈ) ಯಾವುದೇ ಅನುದಾನ ಬಿಡುಗಡೆ ಯಾಗಿರುವುದಿಲ್ಲ.

ಉ) ಪ್ರಶ್ನೆ ಉದ್ಭವಿಸುವುದಿಲ್ಲ.

ಅನುಬಂಧ

ಚಿಕ್ಕಮಗಳೂರು ಜಿಲ್ಲೆಯ ಜಲಾನಯನ ಪ್ರದೇಶಾಭಿವೃದ್ಧಿ ಅಡಿ (ಪಶ್ಚಿಮ ಘಟ್ಟ) ಪ್ರದೇಶಾಭಿವೃದ್ಧಿ ಯೋಜನೆ) 1999-2000ನೇ ಸಾಲಿನಲ್ಲಿ ಕೈಗೊಂಡ ಸಣ್ಣ ನೀರಾವರಿ ಇಲಾಖೆಗೆಸಂಬಂಧ ಪಟ್ಟ ಕಾಮಗಾರಿಗಳ ಪಟ್ಟಿ ವಿವರ.

ಕ್ರ.ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ
1)	ನರಸಿಂಹರಾಜಪುರ ತಾಲ್ಲೂಕು ಮದಬೂರು ಪಿಕಪ್ ಕಾಲುವೆ ಅಭಿವೃದ್ಧಿ	2.00
2)	ನರಸಿಂಹರಾಜನಪುರ ತಾಲ್ಲೂಕು ನಾಗಲಾಪುರ ಹೆಗ್ಗೂರು ಕೆರೆ ಏರಿ ದುರಸ್ತಿ	0.75
3)	ಮೂಡಿಗೆರೆ ತಾಲ್ಲೂಕು ಅಂಗಡಿ ಡೊಡ್ಡಕೆರೆ ತೂಬು ಕಾಲುವೆ ದುರಸ್ತಿ	0.50
4)	ಮೂಡಿಗೆರೆ ತಾಲ್ಲೂಕು ನಂದೀಪುರ ಪಿಕಪ್ ಕಾಲುವೆ ದುರಸ್ತಿ	0.95
5)	ಚಿಕ್ಕಮಗಳೂರು ತಾಲ್ಲೂಕು ನರಗನಹಳ್ಳಿ ಛಾನಲ್ ದುರಸ್ತಿ	0.30
6)	ಚಿಕ್ಕಮಗಳೂರು ತಾಲ್ಲೂಕು ದೊಡ್ಡ ಮಾಗಡವಳ್ಳಿ ಕಾಲುವೆ ದುರಸ್ತಿ	1.00
7)	ಕೊಪ್ಪ ತಾಲ್ಲೂಕು ಹಾಲಮತದೂರು ತಗ್ಗಿನ ಕೆರೆ ಏರಿ ದುರಸ್ತಿ	0.50
8)	ಶೃಂಗೇರಿ ತಾಲ್ಲೂಕು ನಮ್ಮೂರು ವಿಶ ನೀರಾವರಿ ಯೋಜನೆ ಹೊಸ ಕಾಲುವೆ ದುರಸ್ತಿ	1.00
9)	ಚಿಕ್ಕಮಗಳೂರು ತಾಲ್ಲೂಕು ಅನೇಬದಿಹಳ್ಳ ಪಿಕಪ್ ಕಾಲುವೆ ಸಂರಕ್ಷಣಾ ಗೋಡೆ ನಿರ್ಮಾಣ	1.00
10)	ಕೊಪ್ಪ ತಾಲ್ಲೂಕು ಮತ್ತೂರು ಬಳಿ ಸೀತಾ ನದಿಗೆ ತಡೆಗೋಡೆ ನಿರ್ಮಾಣ	2.00
	ಒಟ್ಟು	10.00

ರಾಜ್ಯದಲ್ಲಿ ಭಾರಿ ನೀರಾವರಿ ಯೋಜನೆಗಳು

2832 (3553) ಶ್ರೀ ಬಿ.ಆರ್. ನೀಲಕಂಠಪ್ಪ (ತರೀಕೆರೆ):- ಮಾನ್ಯ ಬೃಹತ್ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ

ಅ) ರಾಜ್ಯದಲ್ಲಿ ಭಾರಿ ನೀರಾವರಿ ಯೋಜನೆಗಳು ಯಾವುವು

ಆ) ಈ ಯೋಜನೆಯಡಿ ಬರುವ ಜಿಲ್ಲೆ ಮತ್ತು ತಾಲ್ಲೂಕುಗಳು ಯಾವುವು?

ಇ) ಈ ಯೋಜನೆಯಡಿಯಲ್ಲಿ ಬರುವ ಪ್ರದೇಶದ ಒಟ್ಟು ವಿಸ್ತೀರ್ಣವೆಷ್ಟು? (ಯೋಜನಾವಾರು ಪಟ್ಟಿ ನೀಡುವುದು)

ಶ್ರೀ ಎಚ್.ಕೆ.ಪಾಟೀಲ್ (ಬೃಹತ್ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು):-

ಅ) ವಿವರಗಳನ್ನು ಲಗತ್ತಿಸಿರುವ ಅನುಬಂಧದಲ್ಲಿ ನೀಡಲಾಗಿದೆ

ಆ), ಇ)